

ವಿಷ್ಣು ಭಟ್ ಹೊಸ್ಮನೆ

ಕಲೆ: ಎಸ್.ವಿ. ಹೂಗಾರ

# ಒಂದು ನಾಟಕದ ಕೊನೆಯ ಅಂಕ

ಸೂರ್ಯತೇಜರು ಮೊನ್ನೆಯಿಂದ ಈ ಕೊನೆಯ ಅಂಕವನ್ನು ಮತ್ತೆ ಮತ್ತೆ ಮಾಡಿಸುತ್ತಲೇ ಇದ್ದಾರೆ. ಇವತ್ತು ಬೆಳಗ್ಗಿನಿಂದಲೇ ಮತ್ತೆ ತಾಲೀಮಿಗೆ ತೊಡಗಿದ್ದಾರೆ. ರಾತ್ರಿ ಒಂಬತ್ತಾಗುತ್ತಾ ಬಂದರೂ ಈ ಅಂಕದ ನಟನೆಯಲ್ಲಿ ಪರಿಪೂರ್ಣತೆ ಬಂದಿಲ್ಲ ಎಂದು ತಮ್ಮ ಸಹನೆಯನ್ನು ಕಳೆದುಕೊಳ್ಳತೊಡಗಿದ್ದರು. ಪಾತ್ರಧಾರಿಗಳಿಗೂ ಯಾಕೆ ಹೀಗೆ ಎಂಬುದು ಅರ್ಥವಾಗುತ್ತಿಲ್ಲ. ನಾವೆಲ್ಲ ಇಷ್ಟು ಸುಂದರವಾಗಿ ನಟಿಸಿದರೂ ಸೂರ್ಯತೇಜರಿಗೆ ಒಪ್ಪಿಗೆಯೇ ಆಗುತ್ತಿಲ್ಲವಲ್ಲ ಎಂಬ ಬೇಸರವೂ ಮೂಡಿ ಅವರ ಸಹನೆಯ ಮಿತಿ ಮೀರತೊಡಗಿತ್ತು. ಅದು "ವಿಷಾದ" ನಾಟಕದ ಕೊನೆಯ ಅಂಕ. ತಾಯಿಗೆ ತನ್ನ ಮಗ ಭಯೋತ್ಪಾದಕನಲ್ಲ ಎಂಬುದು ತಿಳಿದಿದೆ. ಯಾವುದೋ ಭಯೋತ್ಪಾದಕನ ಊಹಿಸಲ್ಪಟ್ಟ ಚಹರೆಗೆ ಹೋಲಿಕೆ ಇದ್ದ ಮಾತ್ರಕ್ಕೆ, ತನ್ನ ಬಡಪಾಯಿ ಮಗನ ಮೇಲೆ ಭಯೋತ್ಪಾದನೆಯ ಆರೋಪವನ್ನು